5.

ಹಜಾರಕ್ಕೆ ಬಂದು ನಿಂತ ಇನ್ಸ್‌ಪೆಕ್ಟರ್ ರಾಜಧಾನಿಗೆ ಅಲ್ಲಿ ನಡೆಯುತ್ತಿರುವುದೇನೆಂದು ತಿಳಿಯುವುದು ಕಷ್ಟವಾಗಲಿಲ್ಲ. ಪಿಸಿ ಸಾರಂಗ ಕೂಡ ಏನೂ ಅರ್ಥವಾಗದಂತೆ ಬೆಪ್ಪಾಗಿ ನಿಂತಿದ್ದ. ಕೆಲಸದಾಳುಗಳು ಒಬ್ಬೊಬ್ಬರೆ ಒಂದೊಂದು ಕಡೆಯಿಂದ ಮುಖ ಮಾತ್ರ ಕಾಣುವಂತೆ ಇಣುಕು ನೋಟ ಹಾಕಿ ನಿಂತಿದ್ದರು.

ಕಾಶಮ್ಮನನ್ನು ಬೆಂಡೆತ್ತಿ ಬಿಡುವಂತೆ ಒದರುತ್ತಿದ್ದ ಮೇನಕಾಳ ಕಣ್ಣುಗಳಲ್ಲಿ ಇನ್ನೂ ಆಕ್ರೋಶ ಇಳಿದಂತೆ ಕಾಣಿಸಲಿಲ್ಲ. ಅವಳ ನೋಟ ಮೆಟ್ಟಿಲಿನಿಂದ ಇಳಿಯುತ್ತಿದ್ದ ಇನ್ಸ್‌ಪೆಕ್ಟರ್ ನನ್ನು ನೋಡುತ್ತಲೇ ಮಾತುಗಳಿಗೆ ಕಡಿವಾಣ ಬಿದ್ದಂತೆ ನಿಂತಳು. ಅವಳಿಗೆ ಆಶ್ಚರ್ಯದ ಜೊತೆಗೆ ಕುತೂಹಲವೂ ಕಂಡಿತು. ಇನ್ಸ್‌ಪೆಕ್ಟರ್ ಮಹಡಿ ಮೇಲೆ ಹೋಗಿ ಮತ್ತೇನನ್ನು ಹುಡುಕಿದ್ದಾನೆ. ಇಲ್ಲಿಯವರೆಗೆ ಅವನು ಅದೆಷ್ಟೋ ಬಾರಿ ಬಂದದ್ದಾಗಿದೆ. ಜೊತೆಗೆ ಲಹರಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕೆದಕಿ ತೆಗೆದದ್ದಾಗಿದೆ. ಇನ್ನೇನು ಬಾಕಿ ಉಳಿದಿದೆ? ಇವಕ್ಕೆಲ್ಲಾ ಕಾರಣ ಚಿಕ್ಕಮ್ಮ! ಯಾರೂ ಇಲ್ಲದ ಸಮಯದಲ್ಲಿ ಇನ್ಸ್‌ಪೆಕ್ಟರ್ ಗೆ ಫೋನ್ ಮಾಡಿ ಕರೆಸಿಕೊಂಡಿದ್ದಾಳೆ. ಇನ್ಸ್‌ಪೆಕ್ಟರ್ ದಾರಿ ತಪ್ಪಿ ಫಾರ್ಮ್ ಹೌಸ್‌ಗೆ ಹೋಗಿದ್ದಾನೆ?!

ಇಲ್ಲ, ಸಾಧ್ಯವೇ ಇಲ್ಲ. ಅಧಿಕಾರಿಯೇನೂ ಮೊದಲ ಬಾರಿಗೆ ಇಲ್ಲಿಗೆ ಬರುವುದಲ್ಲ. ಕಾಶಮ್ಮನೇ ಫಾರ್ಮ್ ಹೌಸ್‌ನ ಮಾಹಿತಿಯನ್ನು ಕೊಟ್ಟಿದ್ದಾಳೆ. ಅಲ್ಲಿ ತಾನು ಕಿರಣನಿಗೆ ಬೇರೆಯದಾಗಿಯೇ ಪಾರ್ಟಿ ಕೊಡುವುದಕ್ಕೆ ಒಪ್ಪಿಕೊಂಡ ಮೇಲೆ. ಈ ವಿಷಯ ಚಿಕ್ಕಮ್ಮನ ಕಿವಿಗೆ ಬಿದ್ದದ್ದಾದರೂ ಹೇಗೆ? ಕಿರಣನೇ ತಿಳಿಸಿರುವನೆ? ಇರಲಾರದು, ಯಾಕೆಂದರೆ ಆ ದಿನ ತನಗೆ ಸರ್‌ಪ್ರೈಸ್ ಮಾಡಲು ಮುಖ್ಯ ಅತಿಥಿಯನ್ನು ಕರೆದುಕೊಂಡು ಬರುವವನಿದ್ದಾನೆ. ಅವನು ಯಾರು? ತಲೆ ಗಿರ‍್ರನೆ ತಿರುಗಿತು. ಸೋಫಾಕ್ಕೆ ಕುಸಿದು ಕುಳಿತು ತಲೆಗೆ ಕೈ ಹಚ್ಚಿದಳು.

ಇನ್ಸ್‌ಪೆಕ್ಟರ್ ರಾಜಧಾನಿ ಕಾಶಮ್ಮನನ್ನು ನೋಡಿದ. ಆಕೆಯ ಕಣ್ಣುಗಳಲ್ಲಿ ಎಂದೂ ಇಲ್ಲದ ಭೀತಿ ತುಂಬಿತ್ತು. ಅವಳು ಬಾಯಿಗೆ ಸೆರಗು ಹಚ್ಚಿ ಅದನ್ನು ಮರೆ ಮಾಚಿದರೂ ಅಧಿಕಾರಿಯ ಸೂಕ್ಷ್ಮ ಕಣ್ಣುಗಳು ಅದನ್ನು ಗಮನಿಸ ದಿರಲಿಲ್ಲ. ಅವನು ಕಾಶಮ್ಮನನ್ನು ಸಾಂತ್ವನಿಸುವಂತೆ ಕಣ್ಣುಗಳಲ್ಲಿಯೇ ಸಮಾಧಾನ ಸೂಚಿಸಿ ಮಾತಾಡಿದ.

'ಕಾಶಮ್ಮ, ನೀವು ನಿಂತಿರುವಿರಲ್ಲ. ಕುಳಿತುಕೊಳ್ಳಿ'

ಇನ್ಸ್‌ಪೆಕ್ಟರ್ ನ ಮಾತಿಗೆ ಮೇನಕಾ ಸೆಟೆದು ನಿಂತಳು.

'ಇನ್ಸ್‌ಪೆಕ್ಟರ್ ಸಾಹೇಬ್ರೆ, ನೀವು ತನಿಖೆ ಹೆಸರಿನಲ್ಲಿ ಅನಗತ್ಯ ಮನೆಯವರಿಗೆಲ್ಲ ತೊಂದರೆ ಕೊಡ್ತಾ ಇದ್ದೀರಿ. ಮೂರು ತಿಂಗಳಿಂದ ಸುಮ್ಮನೆ ಲಹರಿಯನ್ನು ಹುಡುಕ್ತೀವಿ ಅಂತ ಪದೇ ಪದೇ ನಮ್ಮ ಫಾರ್ಮ್ ಹೌಸ್‌ಗೆ ಬಂದು ಇಲ್ಲ ಸಲ್ಲದ ವಿಷಯಗಳನ್ನು ಕೆದಕ್ತಾ ಇದ್ದೀರಿ' ಆರೋಪ ಹೊರಿಸಿದವಳು ನಿಂತೇ ಇದ್ದಳು.

'ಮೇಡಂ. ಸಮಾಧಾನ ಮಾಡ್ಕೊಳ್ಳಿ. ಲಹರಿಯನ್ನು ಹುಡುಕೋವರೆಗೂ ನಮಗೆ ಮಾಹಿತಿ ಬೇಕಾದಲ್ಲಿ ನಿಮ್ಮ ವಿಚಾರಿಸೋ ಹಕ್ಕು ನಮಗಿದೆ. ನಮಗೆ ಸಂಶಯ ಬಂದರೆ ನಿಮ್ಮನ್ನು ನೇರವಾಗಿ ಪ್ರಶ್ನಿಸ್ತೀವಿ. ಇದಕ್ಕೆ ನಿಮ್ಮ ಸಹಕಾರ ಅಗತ್ಯ. ಅನಗತ್ಯ ನೀವು ನಮ್ಮ ಮೇಲೆ ಆರೋಪ ಹೊರಿಸ್ಬಾರ್ದು. ನಾವು ಕೆಲಸ ಮಾಡ್ತೀರೋದು ನಿಮಗಾಗಿ. ಹಾಗಾಗಿ ನಿಮ್ಮಿಂದ ನಾವು ಸಹಾಯ ಯಾಚಿಸೋದು ಸಹಜ'

'ಅದನ್ನೇ ನಾನು ಕೇಳ್ತಾ ಇರೋದು. ಪದೇ ಪದೇ ಕೇಳಿದ್ದನ್ನೇ ಕೇಳಿ ನಮ್ಮ ನೆಮ್ಮದಿಯನ್ನೂ ಹಾಳು ಮಾಡ್ತೀರಿ. ಅದೂ ಯಾರು ಮನೆಯಲ್ಲಿಲ್ಲದ ಸಮಯದಲ್ಲಿ ಬಂದು ಸಂಬಂಧಪಡದವರ ಹತ್ತಿರ ಏನೇನೋ ಪ್ರಶ್ನೆಗಳನ್ನು ಕೇಳಿ ಮಾನಸಿಕವಾಗಿ ನೋಯಿಸ್ತಿದ್ದೀರಿ'

'ಮೇಡಂ, ನೀವು ತಪ್ಪಾಗಿ ತಿಳ್ಕೊಂಡಿದ್ದೀರಿ. ನಾವು ಬಂದಿರೋದು ನಿಮ್ಮ ನೆಮ್ಮದಿಯನ್ನು ಹಾಳು ಮಾಡುವುದಕ್ಕಲ್ಲ. ನೀವು ಕಲಿತವರಲ್ಲವೇ ನಮ್ಮನ್ನು ಅರ್ಥೈಸಿಕೊಂಡಿರುವಿರಿ ಅಂದುಕೊಂಡಿದ್ದೇನೆ. ನಿಮ್ಮನ್ನು ಮುಖ್ಯವಾದ ವಿಷಯ ಕೇಳ್ಬೇಕೂಂತ ಬಂದೆವು'

ಮೇನಕಾ ಅವನನ್ನು ವಿಚಿತ್ರವಾಗಿ ದೃಷ್ಟಿಸಿದಳು. ಈಗಷ್ಟೇ ಫಾರ್ಮ್ ಹೌಸ್‌ನಲ್ಲಿ ಭೇಟಿಯಾಗಿದ್ದಾಗ ಪ್ರಶ್ನಿಸಬಹುದಿತ್ತು. ಆದರೆ ಇಲ್ಲಿಯವರೆಗೂ ಬಂದು ತನಗಾಗಿ ಕಾಯುತ್ತಿರುವುದೇ? ಇನ್ಸ್‌ಪೆಕ್ಟರ್ ನ ವರ್ತನೆ ಸರಿ ಕಾಣಿಸಲಿಲ್ಲ.

'ನೀವು ಆ ಪ್ರಶ್ನೆಯನ್ನು ಫಾರ್ಮ್ ಹೌಸ್‌ನಲ್ಲಿ ಭೇಟಿಯಾದಾಗ ಕೇಳಬಹುದಿತ್ತಲ್ಲವೆ? ಮನೆಯಲ್ಲಿ ಡ್ಯಾಡಿ ಕೂಡ ಇಲ್ಲಾಂತ ಹೇಳಿದ್ದೆ. ಅವರು ಬರೋದಿಕ್ಕೆ ಇನ್ನೂ ಮೂರು ದಿವಸ ಆಗುತ್ತೆ. ಆದ್ರೂ ಏನೋ ನೆಪ ಹೂಡಿ ಕೊಂಡು ಇಲ್ಲಿಗೆ ಬಂದ್ರಿ. ಇಲ್ಲಿ ನೋಡಿದ್ರೆ ಮಾನಸಿಕವಾಗಿ ನೊಂದಿರೋ ಚಿಕ್ಕಮ್ಮನ ಗೋಳು ಹೊಯ್ಕೊಳ್ತಾ ಇದ್ದೀರಿ' ಮೇನಕಾ ಕಾಶಮ್ಮನ ಪರವಾಗಿ ಮಾತನಾಡಿದಾಗ ಇನ್ಸ್‌ಪೆಕ್ಟರ್ ಮತ್ತು ಪಿಸಿ ಇಬ್ಬರೂ ಮುಖ ಮುಖ ನೋಡಿಕೊಂಡರು.

ತಾನು ಮೆಟ್ಟಿಲಿಳಿದು ಬರುವಾಗ ಕಾಶಮ್ಮನ ಜೊತೆಗೆ ವಾಗ್ಯುದ್ಧಕ್ಕೆ ಇಳಿದಿದ್ದ ಹುಡುಗಿ ಇವಳೆಯೇ ಅನಿಸಿತು ಇನ್ಸ್‌ಪೆಕ್ಟರ್ ಗೆ. ಪಿಸಿಗೂ ಹಾಗೇ ಅನಿಸಿತು. ತನ್ನ ಕಣ್ಣೆದುರಿನಲ್ಲಿಯೇ ಕಾಶಮ್ಮನ ಮೇಲೆ ಹರಿಹಾಯ್ದ ಹುಡುಗಿ ಈಗ ಅವಳ ಪರವಾಗಿ ವಾದಿಸುತ್ತಿದ್ದಾಳೆ!

'ಮೇಡಂ, ಮಾನಸಿಕವಾಗಿ ನೊಂದಿರೋ ಕಾಶಮ್ಮರವರಿಗೆ ಮನಸ್ಥೈರ್ಯ ನೀಡುವುದು ನಮ್ಮ ಕರ್ತವ್ಯ. ಅದಕ್ಕಾಗಿ ನಾವು ಇಲ್ಲಿಗೆ ಬರಲೇಬೇಕಿತ್ತು. ನಮಗೆ ನಿಮ್ಮಿಂದಲೂ ಕೆಲವೊಂದು ಮಾಹಿತಿಗಳು ಬೇಕು. ತಾಳ್ಮೆ ಕಳೆದುಕೊಳ್ಳದೆ ನಮಗೆ ಉತ್ತರಿಸಬೇಕು ನೀವು. ಈಗಲೇ ಅಲ್ಲ. ನಾವು ಬೇಕಾದರೆ ಇನ್ನೊಮ್ಮೆ ಬರ್ತೀವಿ'

ಅವರ ಮಾತಿನಿಂದ ಆಘಾತಕ್ಕೊಳಗಾದವರಂತೆ ಕುಳಿತಿದ್ದ ಮೇನಕಾಗೆ ಇರುಸುಮುರಿಸಿಗಿಟ್ಟುಕೊಂಡಿತು. ಇನ್ನು ತನ್ನನ್ನು ಯಾವ ಪ್ರಶ್ನೆ ಕೇಳಿ ಕೇಸ್‌ನಲ್ಲಿ ಸಿಲುಕಿಸುವ ಹುನ್ನಾರ? ಮನೆ ಬಿಟ್ಟು ಹೋದವಳು ಹೋದರೂ ಅವಳ ನೆರಳು ಕಾಣುವವರೆಗೂ ನೆಮ್ಮದಿ ಇಲ್ಲ. ತಾಳ್ಮೆ ನಿಧಾನವಾಗಿ ಸಾಯುತ್ತಿತ್ತು. ತಲೆಗೆ ಕೈ ಹಚ್ಚಿ ಕುಳಿತು ಇನ್ಸ್‌ಪೆಕ್ಟರ್ ನ ಮಾತನ್ನು ಒಪ್ಪಿಕೊಳ್ಳುವಂತೆ ತಲೆಯಲುಗಿಸಿದಳು.

ಕಾಶಮ್ಮ ಗೊಂಬೆಯಂತೆ ನಿಂತಿದ್ದಳು. ಮೇನಕಾಳ ಮಾತು ಅವರಲ್ಲಿಯೂ ಆತಂಕವನ್ನು ಸೃಷ್ಟಿಸಿತ್ತು. ಇನ್ನು ಪೊಲೀಸ್ ಅಧಿಕಾರಿ ಹೊರಟ ಮೇಲೆ ತನಗೇನು ಕಾದಿದೆ? ಅನ್ನುವ ಭಯದಲ್ಲಿ ಅವರು ಮೆಲ್ಲಗೆ ಬೆವರುತ್ತಿದ್ದರು.

ಮೇನಕಾಳ ಮೇಲೆ ಭರವಸೆಯಿಲ್ಲದ ಅಧಿಕಾರಿಗೂ ಇದು ತಲೆಗೆ ಬಂದಿತ್ತು. ಕಾಶಮ್ಮನನ್ನು ಆಕೆ ಏನಾದರೂ ಮಾಡುತ್ತಾಳೆನ್ನುವುದು ದೂರವಾಗಲಿಲ್ಲ. ಅದಕ್ಕಾಗಿ ಮೇನಕಾಳಿಗೆ ಹೇಳುವ ಬದಲು ಕಾಶಮ್ಮನನ್ನು ಕರೆದ ಇನ್ಸ್‌ಪೆಕ್ಟರ್.

'ಅಮ್ಮಾ, ನೀವು ಯಾವುದಕ್ಕೂ ಹೆದರುವ ಅಗತ್ಯವಿಲ್ಲ. ನಿಮಗೇನಾದರೂ ತೊಂದರೆಯಾದ್ರೆ ನಮಗೆ ಫೋನ್ ಮಾಡಿ. ನಾವಿಲ್ಲಿ ಕೂಡಲೇ ಪ್ರತ್ಯಕ್ಷವಾಗ್ತೀವಿ. ಅಥವಾ ನಿಮಗೆ ಯಾರಿಂದಲಾದರೂ ತೊಂದರೆ ಅನಿಸಿದರೆ ದಯವಿಟ್ಟು ಅವರ ಬಗ್ಗೆ ಕಂಪ್ಲೇಂಟ್ ಬರೀರಿ. ನಾವು ಆ್ಯಕ್ಷನ್ ತಗೊಳ್ತೀವಿ' ಅಧಿಕಾರಿಯ ಭರವಸೆಯ ಮಾತುಗಳಿಗೆ ಮೇನಕಾಳ ಮೈಯಲ್ಲಿ ಮುಳ್ಳುಗಳೆದ್ದಂತಾಯಿತು.

'ಸಾಹೇಬ್ರೆ, ನೀವು ತಿಳ್ಕೊಂಡ ಹಾಗೆ ಚಿಕ್ಕಮ್ಮನಿಗೇನೂ ಇಲ್ಲಿ ಅಪಾಯವಿಲ್ಲ. ನಾವು ಅವರ ಜೊತೆಗೆ ಇದ್ದೀವಿ. ಅದರ ಬಗ್ಗೆ ನೀವು ಚಿಂತಿಸುವುದು ಬೇಡ' ಅವಳ ಮಾತಿನಲ್ಲಿ ವ್ಯಂಗ್ಯವಿತ್ತು.

'ಮೇಡಂ. ನೀವು ಇಲ್ಲಾಂತ ಹೇಳ್ತಿಲ್ಲ. ಆದರೂ ಅವರಿಗೆ ಮಾನಸಿಕ ಧೈರ್ಯ ತುಂಬಿಸಬೇಕು. ಅದು ನಿಮ್ಮಿಂದ ಸಾಧ್ಯವಿಲ್ಲ ಅಲ್ಲವೆ?' ಅಂದ ಇನ್ಸ್‌ಪೆಕ್ಟರ್ ನತ್ತ ಸಿಟ್ಟಿನ ನೋಟ ಮೇನಕಾಳದ್ದು. ಶ್ರೀಮಂತಿಕೆಯಲ್ಲಿ ಹುಟ್ಟಿದ ಹೆಣ್ಣಿಗೆ ಅಷ್ಟೇ ದರ್ಪ, ಮುಂಗೋಪ. ಅದನ್ನು ತಿಳಿಯದವನಲ್ಲ ಅಧಿಕಾರಿ.

'ಯಾಕೆ ಸಾಧ್ಯವಿಲ್ಲ?' ಚುಟುಕಾಗಿತ್ತು ಪ್ರಶ್ನೆ.

'ಮತ್ಯಾಕೆ ನೀವು ಅವರ ಜೊತೆ ಜಗಳ ಕಾದ್ರಿ? ನಾವು ಇಲ್ಲಿರೋವಾಗ್ಲೇ ನೀವು ಅವರನ್ನು ಕಂಗೆಡಿಸಿ ಬಿಟ್ಟೀರಿ. ನಾವಿಲ್ಲದ ಸಮಯದಲ್ಲಿ ನೀವೇನು ಮಾಡ್ತೀರಿ. ನೋಡಿ, ಆಕೆಗೆ ಏನಾದ್ರೂ ಆದ್ರೆ ನಿಮ್ಮನ್ನು ಸುಮ್ನೆ ಬಿಡೋದಿಲ್ಲ' ಎಚ್ಚರಿಕೆಯ ಮಾತುಗಳನ್ನು ಹೇಳಿದ ಅಧಿಕಾರಿಯನ್ನು ತಿವಿಯಂತೆ ನೋಡಿದ ಮೇನಕಾ ಗೊಣಗುತ್ತಲೇ ಅಲ್ಲಿಂದ ಎದ್ದು ಹೋದಳು.

ಕಾಶಮ್ಮನ ಮುಖದಲ್ಲಿ ಇನ್ನೂ ಭೀತಿ ಮರೆಯಾಗಲಿಲ್ಲ. ಇನ್ಸ್‌ಪೆಕ್ಟರ್ ರಾಜಧಾನಿ, ಪಿಸಿ ಸಾರಂಗ ಇಬ್ಬರೂ ಅವರಿಗೆ ವಂದಿಸಿ ಹೊರಗೆ ಬಂದರು.

* * *

ಇನ್ಸ್‌ಪೆಕ್ಟರ್‌ಗೆ ತಲೆನೋವಾದ ಲಹರಿ ಕಣ್ಮರೆ

ಅಚ್ಚ ಬಿಳಿ ಬಣ್ಣದ ಪೈಂಟ್ ಕಂಡ ಠಾಣೆಯ ದೊರಗು ನೆಲದ ಮೇಲೆ